

ಕಠ್ಮಂಡುವಿನ ಲಲಿತ್‌ಪುರ್‌ನಲ್ಲಿ ನಡೆದ ಜಾತ್ರೆಯ ಸಂದರ್ಭದಲ್ಲಿ 'ಕುಮಾರಿ' ಸಾರ್ವಜನಿಕ ದರ್ಶನ

ಹನ್ನೆರಡು 'ಕುಮಾರಿ'ಯರಿದ್ದು ಮೂವರು ಕಠ್ಮಂಡುವಿನಲ್ಲಿದ್ದಾರೆ. ಅವರಲ್ಲಿ ದರ್ಬಾರ್ ಚೌಕದಲ್ಲಿರುವವಳು ರಾಜರ 'ಕುಮಾರಿ.' ಹೆಚ್ಚು ಪ್ರಮುಖಳು, ಪ್ರಸಿದ್ಧಳು.

2008ರಲ್ಲಿ ರಾಜಶಾಹಿ ಕೊನೆಗೊಳ್ಳುವ ಮೊದಲು ರಾಜರಾಣಿ ಪರಿವಾರದವರು ವರ್ಷದ ನಿಗದಿತ ದಿನಗಳಲ್ಲಿ ಕುಮಾರಿಯನ್ನು ಪೂಜಿಸುತ್ತಿದ್ದರು. ತಲೆಬಾಗಿ ನಮಿಸಿ, ಕಾಣಿಕೆಯಿತ್ತು ಆಶೀರ್ವಾದ ಪಡೆಯುತ್ತಿದ್ದರು. ಈಗಲ್ಲಿ ಜಾತ್ಯತೀತ ಜನತಂತ್ರ ಸ್ಥಾಪನೆಯಾದ ಬಳಿಕ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ಸರ್ಕಾರದ ಹಿರಿಯ ಅಧಿಕಾರಿಗಳು ಪಾದಸ್ಪರ್ಶ ಮಾಡಿ ಆಶೀರ್ವಾದ ಪಡೆಯುತ್ತಾರೆ.

ಈಗಿನ ರಾಜ'ಕುಮಾರಿ'ಯ ಹೆಸರು ತೃಷ್ಣಾ ಶಾಕ್ಯ ಕುಮಾರಿ. ಆಕೆಗೀಗ ಐದು ವರ್ಷ. ಕುಮಾರಿಯಾದಾಗ ಮೂರು ವರ್ಷ. ಆಕೆಗಿಂತ ಹಿಂದೆ ಇದ್ದದ್ದು ಕುಮಾರಿ ಮತೀನಾ ಶಾಕ್ಯ. ಮತೀನಾ ಈಗ ತಾಯ್ತಂದೆಯರ ಬಳಿ ಇದ್ದು ಶಾಲೆಗೆ ಹೋಗತೊಡಗಿದ್ದಾಳೆ. 2015ರ ಭೂಕಂಪದಲ್ಲಿ ಕಠ್ಮಂಡುವಿನ ದರ್ಬಾರ್ ಚೌಕದ ಸಾಕಷ್ಟು ಪುರಾತನ ರಚನೆ, ಸ್ಮಾರಕಗಳು ನೆಲಸಮವಾದವು. ಆದರೆ 'ಕುಮಾರಿ ಘರ್'ಗೆ ಏನೂ ಆಗಲಿಲ್ಲ. ಕುಮಾರಿಯರ ಪಾವಿತ್ರ್ಯ, ಸಚ್ಚಾರಿತ್ರ್ಯ, ಅವರ ಮೇಲೆ ಜನರಿಟ್ಟ ಶ್ರದ್ಧೆಗೆ ಅದು ಸಾಕ್ಷಿಯೆಂದು ಜನ ನಂಬಿದ್ದಾರಂತೆ!

## ನೆಲ ಸೋಕದ ಕುಮಾರಿ ಪಾದ

ಕಠ್ಮಂಡುವಿನ ಹೃದಯ ಭಾಗದಲ್ಲಿ ಪಾರಂಪರಿಕ ತಾಣಗಳಿರುವ ಜಾಗ ದರ್ಬಾರ್ ಚೌಕವಿದೆ. ದುರ್ಗಾ ದೇವಾಲಯ, ಕಾಷ್ಠ ಮಂಟಪ, ಹನುಮಾನ್ ಧೋಕಾ, ಕಾಲಭೈರವನೇ ಮೊದಲಾದ ಹಳೆಯ, ಸುಂದರ, ಅರೆ ಶಿಥಿಲ ಕಟ್ಟಡಗಳ ನಡುವೆ ಚಂದದ ಉಪ್ಪರಿಗೆ ಮನೆ 'ಕುಮಾರಿ ಘರ್' ಇದೆ. ವಿಸ್ತೃತ ಕುಸುರಿ ಕೆಲಸವಿರುವ ಬಾಗಿಲು, ದಾರಂದ, ಕಿಟಕಿಗಳ ಆ ಉಪ್ಪರಿಗೆ ಮನೆ ಕುಮಾರಿಯರನ್ನಿಟ್ಟು, ಬೆಳೆಸುವ ಸ್ಥಳ. ಇಡೀ ಮನೆಯ ಆಗುಹೋಗು ಕುಮಾರಿಯ ಸುತ್ತ ನಿಂತಿದೆ. ಕುಮಾರಿಯ ಊಟತಿಂಡಿ, ಪಾಠ, ಭಜನೆ, ದರ್ಶನ, ಪೂಜೆ, ಕಾವಲಿಗೆಂದು ಪ್ರತ್ಯೇಕ ತಂಡವೇ ಇದೆ. ಅವಳಿಗೆ ಮಾಡುವ ಅಡುಗೆ ಬೇರೆಯೇ. ರಾಜರ 'ಕುಮಾರಿ'ಯನ್ನು ಈಗ ನೋಡಿಕೊಳ್ಳುತ್ತಿರುವವರು ಗೌತಮ್ ಶಾಕ್ಯ. ಅವರ ಕುಟುಂಬ ಹನ್ನೊಂದು ತಲೆಮಾರುಗಳಿಂದ ಆ ಕೆಲಸದಲ್ಲಿ ತೊಡಗಿದೆ. ಉಳಿದಂತೆ ಕುಮಾರಿಯ ದಿನಚರಿ, ಕೆಲಸಗಾರರು ಯಾರು, ಹೇಗೆ, ಏಕೆ ಎನ್ನುವುದೆಲ್ಲ ಹೊರಜಗತ್ತಿಗೆ ತಿಳಿಯದ ರಹಸ್ಯಗಳು.

ಮನೆಯ ಉಪ್ಪರಿಗೆಯಲ್ಲಿ ಕುಸುರಿಕೆತ್ತನೆಯ ಮೂರು ಗವಾಕ್ಷಿಗಳಿವೆ. ಕೆಳಗೆ ನಿಂತ ಜನರು ಮೇಲೆ ನೋಡುತ್ತ ಕುಮಾರಿ ಈಗ ಮುಖದರ್ಶನ ನೀಡಬಹುದು, ಇನ್ನೊಂದು ಗಳಿಗೆಗೆ ನೀಡಬಹುದೆಂದು ಕಾದು ನಿಲ್ಲುತ್ತಾರೆ. ಹಣೆಗೆ ಹಚ್ಚಿದ ರಕ್ತ ಕೆಂಪು ಬಣ್ಣ, ನಡುವೆ ಮೂರನೆಯ ಕಣ್ಣೆನಂತೆ ಕಾಣುವ ಅಗ್ನಿ ಚಕ್ಷು, ಎದ್ದು